**ಪಿ.ಡಬ್ಲೂ.3**

ಇಂದು ದಿಃ **13.02.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 1 ರಿಂದ 8 ನೇ ಪ್ರತಿವಾದಿ ಪರ ಶ್ರೀ ಸಿ ಎ ಕೆ ವಕೀಲರಿಂದ</u>**

1. ನಾನು ಎಸ.ಎಸ.ಎಲ್.ಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ದಿಃ 19.01.2024 ರಂದು ನಾನು ಹಾಗೂ ಪ್ರಾಸಾ2 ರವರು ಬಂದು ಸಾಕ್ಷಿ ನುದಿಡಿರುತ್ತೇವೆ ಎಂದರೇ ಸಾಕ್ಷಿ ನಾನು ಬಂದಿರುತ್ತೇನೆ ಎನ್ನುತ್ತಾರೆ. ಪ್ರಾಸಾ2 ರವರು ಬಂದು ಸಾಕ್ಷಿ ನುಡಿದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿರಲಿಲ್ಲ. ವಾದಿ ಸಾಕ್ಷಿ ನುಡಿಯಲು ಬನ್ನಿ ಎಂದು ನನಗೆ ಹೇಳಿದ್ದರು. ನನಗೆ ಸಾಕ್ಷಿ ನುಡಿಯಲು ವಾದಿ ನಾನು ಬಂದು ಸಾಕ್ಷ ನುಡಿದ ಎರಡು ತಿಂಗಳ ಮೊದಲೇ ಹೇಳಿದ್ದರು. ಬೇರ ಯಾರಿಗೆ ಸಾಕ್ಷಿ ನುಡಿಯಲು ವಾದಿ ಕೋರಿಕೊಂಡಿದ್ದರು ನನಗೆ ಗೊತ್ತಿಲ್ಲ.

2. ಸದರಿ ದಿಃ 19.01.2024 ರಂದು ನಾನು, ವಾದಿ, ಪ್ರಾಸಾ2 ಹಾಗೂ ಮಂಜುನಾಥ ಬಡಕುರಿ ಈ ಪ್ರಕರಣಕ್ಕೆ ಸಂಬಂದಿಸಿದಂತೆ ನ್ಯಾಯಾಲಯಕ್ಕೆ ಬಂದಿದ್ದೆವು ಎಂದರೇ ಸಾಕ್ಷಿ ಸದರಿಯವರು ಬಂದದ್ದು ನನಗೆ ಗೊತ್ತಿಲ್ಲ ನಾನು ಒಬ್ಬನೇ ಬಂದಿರುತ್ತೇನೆ ಎನ್ನುತ್ತಾರೆ. ಸಾಕ್ಷ್ಯ ಪ್ರಮಾಣ ಪತ್ರ ವನ್ನು ತಯಾರಿಸಲು ಮಾಹಿತಿಯನ್ನು ವಾದಿಯೇ ನೀಡಿದ್ದ ಎಂದರೆ ಸಾಕ್ಷಿ ವಾದಿ ನನಗೆ ಮಾಹಿತಿ ನೀಡಿದ್ದು ನಾನು ವಕೀಲರಿಗೆ ಮಾಹಿತಿ ನೀಡಿ ಪ್ರಮಾಣ ಪತ್ರ ವನ್ನು ತಯಾರಿಸಲು ಹೇಳಿರುತ್ತೇನೆ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರ ದಲ್ಲಿ ಬರೆಸಿರುವ ಸಂಗತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

3. ನನಗೆ ನಮ್ಮ ಗ್ರಾಮದ ಮಂಜುನಾಥ ಬಡಕುರಿ ಎಂಬುವವರ ಪರಿಚಯವಿದೆ. ನನಗೆ ಪ್ರಾಸಾ2 ರವರ ಪರಿಚಯವಿದೆ ಎಂದರೆ ಸರಿಯಲ್ಲ. ಸದರಿ ಪ್ರಾಸಾ2 ರವರ ಮನೆ ಹಾಗೂ ನಮ್ಮ ಮನೆ ಒಂದೇ ಓಣಿಯಲ್ಲಿದೆ. ಸದರಿ ಮಂಜುನಾಥ ಬಡಕುರಿ ರವರ ಮನೆ ಬೇರೆ ಓಣಿಯಲ್ಲಿದೆ. ವಾದಿ ನನಗೆ ಸಾಕ್ಷ್ಯ ನುಡಿಯಲು ಬರುವಂತೆ ಕೊರಿಕೊಳ್ಳುವವರಗೆ ಈ ದಾವೆ ದಾಖಲಾದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಈ ದಾವೆಯನ್ನು 2018 ನೇ ಸಾಲಿನಲ್ಲಿ ದಾಖಲಿಸಲಾಗಿದೆ. ಅದನ್ನು ನಾನು ವಾದಿಯಿಂದ ಕೇಳಿ ತಿಳಿದುಕೊಂಡಿರುತ್ತೇನೆ.

**ಪಿ.ಡಬ್ಲೂ.3**

4. ವಾದಿ ಈ ದಾವೆ ದಾಖಲಿಸುವ ಮೊದಲು ಅಸಲು ದಾವಾ ನಂ.264/2012 ನ್ನು ದಾಖಲಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ವಾದಿ ದಾಖಲಿಸಿದ ಇನ್ನೊಂದು ದಾವೆ ಅಸಲು ದಾವಾ ನಂ.537/2015 ರ ಬಗ್ಗೆಯೂ ಸಹ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ದಾವೆಗಳು ಚಾಲ್ತಿಯಲ್ಲಿವೆಯೂ ಅಥವಾ ಮುಕ್ತಾಯಗೊಂಡಿವೆಯೋ ಎಂದು ನನಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ದಾವೆಗಳ ಕುರಿತು ವಾದಿ ನನಗೆ ಹೇಳಿಲ್ಲ.

5. ವಾದಿ ಈ ದಾವೆಯನ್ನು ಆತನ ಚಿಕ್ಕಪ್ಪಂದಿರ ವಿರುದ್ದ ದಾಖಲಿಸಿರುತ್ತಾರೆ. ಹಾಗೂ ಬೇರೆ ಯಾರ ವಿರುದ್ದ ಈ ದಾವೆ ದಾಖಲಿಸಿರುತ್ತಾನೆ ಎಂದು ನನಗೆ ಮಾಹಿತಿ ಇಲ್ಲ. ಈ ದಾವೆಯನ್ನು ವಾದಿ ದಾವಾ ಸ್ವತ್ತುಗಳಲ್ಲಿ ಪಾಲು ಕೇಳಿ ದಾಖಲಿಸಿರುತ್ತಾರೆ. ದಾವಾ ಸ್ವತ್ತು ಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಒಟ್ಟು 3 ಜಮೀನು ಹಾಗೂ ಒಂದು ಮನೆ ಇದೆ. ದಾವಾ ಜಮೀನುಗಳ ಸರ್ವೇ ನಂ.53/1 , 55/1 ಮತ್ತು 779/2 ಎಂದು ಇವೆ. ಮನೆ ನಂಬರ ನನಗೇ ನೆನಪಿಲ್ಲ. ಸದರಿ ಸರ್ವೇ ನಂ.53/1 ಜಮೀನು 38 ಗುಂಟೆ ಇದೆ. ಸರ್ವೇ ನಂ.779/2 ಜಮೀನು 3 ಎಕರೆ ಇದೆ. ಹಾಗೂ ಸರ್ವೇ ನಂ.55/1 ಜಮೀನು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ನೆನಪಿಲ್ಲ. ಸದರಿ ಈ ಮೇಲೆ ಹೇಳಿದ ಜಮೀನುಗಳ ಕ್ಷೇತ್ರಗಳು ವಾದಿಯ ತಂದೆ ನನ್ನ ಮುಂದೆ ಹೇಳುತ್ತಿದುದ್ದರಿಂದ ನನಗೆ ಗೊತ್ತಿದೆ ನಾನು ದಾವಾ ಜಮೀನುಗಳ ಉತಾರಗಳನ್ನು ನೊಡಿಲ್ಲ.

6. ದಾವಾ ಜಮೀನುಗಳು ಭೂ ನ್ಯಾಯ ಮಂಡಳಿ ಯಿಂದ ಮಂಜೂರು ಆಗಿವೆ ಎಂದು ವಾದಿಯ ತಂದೆ ಹೇಳುತ್ತಿದುದ್ದರಿಂದ ನನಗೆ ಗೊತ್ತಿದೆ. ದಾವಾ ಜಮೀನುಗಳ ಈಗಿನ ಹಿಸ್ಸಾ ನಂಬರಗಳು ಹಾಗೂ ಸದರಿ ಜಮೀನುಗಳು ಯಾರ ಸ್ವಾದಿನದಲ್ಲಿ ಇವೆ ಎಂದು ಅದರ ಈಗಿನ ವಾಸ್ತವಿಕ ಸ್ಥಿತಿ ನನಗೆ ವೈಯಕ್ತಿಕ ವಾಗಿ ಗೊತ್ತಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಮನೆ ವಿನಾಯಕ ನಗರದಲ್ಲಿದೆ ಎಂದರೆ ಸಾಕ್ಷಿ ಮ್ಯಾಗೇರಿ ಓಣಿಯಲ್ಲಿ ಇದೆ ಎನ್ನುತ್ತಾರೆ. 1 ನೇ ಪ್ರತಿವಾದಿಯ ಮನೆ ವಿನಾಯಕ ನಗರದಲ್ಲಿದೆ ಎಂದು ನನಗೆ ಗೊತ್ತಿದ್ದರು ಸಹ ಮ್ಯಾಗೇರಿ ಓಣಿಯಲ್ಲಿ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆ 1 ನೇ ಪ್ರತಿವಾದಿಯ ಮನೆಯಿಂದ 2 ಕಿ ಮಿ ಅಂತರದಲ್ಲಿದೆ ಎಂದರೆ ಸರಿಯಲ್ಲ.

7. ಹಜಾರೆ ರವರ ಮನೆತನದ ಬೇರೆ ನಮ್ಮ ಮನೆತನದ ಬೇರೆ ಎಂದರೆ ಸರಿ. ನಮ್ಮ ಮನೆತನಕ್ಕೂ ಅವರ ಮನೆತನಕ್ಕೂ ಯಾವುದೇ ನಿಕಟವಾದ ಸಂಪರ್ಕ ಇಲ್ಲ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಣ್ಣ ಹಜಾರೆ ಮನೆತನದವರ ಜೊತೆ ಕೂಡಿ ವ್ಯವಸಾಯ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ಅಣ್ಣ ಹಜಾರೆ ಮನೆತನದವರ ಜೊತೆ ಕೂಡಿ ವ್ಯವಸಾಯ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಜಾರೆ ಮನೆತನದಲ್ಲಿ ಅವರ ಕುಟುಂಬದ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಹಜಾರೆ ಮನೆತನದ ವ್ಯವಹಾರಗಳಲ್ಲಿ ನಾನು ಭಾಗವಹಿಸಿಲ್ಲ ಎಂದರೆ ಸರಿ.

8. ವಾದಿ ಈ ದಾವೆಯಲ್ಲಿ ಸಲ್ಲಿಸಿದ ವಂಶಾವಳಿಯ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯ ಕುಟುಂಬದ ಮೂಲ ಪುರುಷ ಹನುಮಂತಪ್ಪ ಹಜಾರೇ. ಸದರಿ ಹನುಮಂತಪ್ಪ ಹಜಾರೆ ರವರ ಹೆಂಡತಿಯ ಹೆಸರು ಸಾವಕ್ಕ. ಸದರಿಯವರಿಗೆ 5 ಜನ ಹೆಣ್ಣು ಮಕ್ಕಳು ಹಾಗೂ 3 ಜನ ಗಂಡು ಮಕ್ಕಳು. ಸದರಿ ಹೆಣ್ಣು ಮಕ್ಕಳ ಹೆಸರು ನೀಲವ್ವ , ತುಳಸವ್ವ , ಸುಧಾ, ಪಾರವ್ವ ಹಾಗೂ ಯಲ್ಲವ್ವ ಎಂದು. ಗಂಡು ಮಕ್ಕಳ ಹೆಸರು ಮಾರುತಿ , ಫಕ್ಕಿರಪ್ಪ ಮತ್ತು ಗಿರಿಶ ಎಂದು. ಸದರಿಯವರಲ್ಲಿ ನೀಲವ್ವ ಎಂಬುವವರು ದೊಡ್ಡವರು. ಆ ನಂತರ ಮಾರುತಿ ಜನಿಸಿರುತ್ತಾರೆ. ನಂತರ ತುಳಸವ್ವ , ಆನಂತರ ಫಕಿರಪ್ಪ , ಆನಂತರ ಸುಧಾ , ಪಾರವ್ವ , ಯಲ್ಲವ್ವ ಆನಂತರ ಗಿರಿಶ ರವರು ಜನಿಸಿರುತ್ತಾರೆ. ಸದರಿ ಈ ಮೇಲೆ ಹೇಳಿದಂತೆ ಸದರಿ ಹನುಮಂತಪ್ಪ ಮತ್ತು ಸಾವಕ್ಕ ರವರ ಮಕ್ಕಳು ಒಬ್ಬರಾದ ನತಂರ ಒಬ್ಬರು ಜನಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲದೇ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

9. ಸದರಿ ಹನುಮಂತಪ್ಪ ಮತ್ತು ಸಾವಕ್ಕ ರವರ ಮಗ ಮಾರುತಿ ರವರ ಮದುವೆ ಹಿಂಚಗಿರಿ ಮಠದಲ್ಲಿ ಆಗಿದೆ. ಸದರಿ ಹಿಂಚಗಿರಿ ಮಠ ವಿಜಯಪುರ ಜಿಲ್ಲೇಯಲ್ಲಿ ಇದೆ. ಸದರಿ ಮದುವೆಗೆ ನಾನು ಹೊಗಿರಲಿಲ್ಲ. ನನ್ನ ಅಣ್ಣ ಹೊಗಿದ್ದರು. ಸದರಿ ಮಾರುತಿ ರವರ ಮದುವೆ ಹುಬ್ಬಳ್ಳಿಯ ಹೊಸುರು ರಸ್ತೆಯ ಬಳಿ ಇರುವ ತಿಮ್ಮಸಾಗರ ಮಠದಲ್ಲಿ ಆಗಿದೆ ಎಂದರೆ ಸರಿಯಲ್ಲ. ಮಾರುತಿಯ ಹೆಂಡತಿ ಆತನ ತಾಯಿ ಸಾವಕ್ಕಳ ಅಣ್ಣನ ಮಗಳು ಎಂದರೆ ಸರಿಯಲ್ಲ. ಸದರಿ ಮಾರುತಿಯ ಹೆಂಡತಿ ಆತನ ತಾಯಿ ಸಾವಕ್ಕಳ ಅಣ್ಣನ ಮಗಳು ಎಂದು ನನಗೆ ಗೊತ್ತಿದ್ದರು ಸಹ ನಾನು ಅಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಪ್ರಾಸಾ2 ನನಗಿಂತ 10 ವರುಷ ದೊಡ್ಡವರು ಎಂದರೆ ಸರಿ. ಮಾರುತಿಯ ತಾಯಿಯ ಹೆಸರು ಸಾವಕ್ಕ ಎಂದು ಇದ್ದು ಹಾಗೂ ಆತನ ಹೆಂಡತಿಯ ಹೆಸರು ಸಹ ಸಾವಕ್ಕ

ಎಂದು ಇದುದ್ದರಿಂದ ಆತನ ಹೆಂಡತಿಗೆ ದ್ಯಾಮವ್ವ ಎಂತಲೂ ಕರೆಯುತ್ತಿದ್ದರು ಎಂದರೆ ಸಾಕ್ಷಿ ಸಾವಕ್ಕ ಎಂತಲೇ ಕರೆಯುತ್ತಿದ್ದರು ಎನ್ನುತ್ತಾರೆ. ಸದರಿ ಮಾರುತಿ ಹೆಂಡತಿಯ ತಂದೆಯ ಹೆಸರು ಯಲ್ಲಪ್ಪ ಭರಮಪ್ಪ ವಾಘಮೊಡೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರುತಿಯ ಹೆಂಡತಿಯ ತಾಯಿಯ ಹೆಸರು ದೇವಕ್ಕ ವಾಘಮೊಡೆ ಎಂದರೆ ನನಗೆ ಗೊತ್ತಿಲ್ಲ. ಮಾರುತಿಯ ಹೆಂಡತಿಯ ತವರು ಮನೆ ಕುಂದಗೋಳ ಎಂದರೆ ಸಾಕ್ಷಿ ಬೆಳ್ಳಿಗಟ್ಟಿ ತಾಃ ಧಾರವಾಡ ಎನ್ನುತ್ತಾರೆ. ಮಾರುತಿಯ ಹೆಂಡತಿಯ ತವರು ಮನೆ ಕುಂದಗೋಳ ಎಂದು ಗೊತ್ತಿದ್ದರು ಸಹ ನಾನು ಬೆಳ್ಳಿಗಟ್ಟಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರುತಿಯ ಹೆಂಡತಿಯ ತವರು ಊರು ಬೆಳ್ಳಿಗಟ್ಟಿ ಎಂದು ಹೇಳಿದ್ದು ಅವರ ಮನೆತನದ ಹೆಸರು ನನಗೆ ಗೊತ್ತಿಲ್ಲ. ಮಾರುತಿಯ ಹೆಂಡತಿಯ ತವರು ಮನೆಯಲ್ಲಿ ಯಾರು ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

11. ವಾದಿಯ ತಾಯಿಯನ್ನು ಬೈಲಹೊಂಗಲ ತಾಲೂಕಿನ ದೊಡವಾಡ ಗ್ರಾಮದ ಬುಡರಕಟ್ಟಿ ಮನೆತನದಲ್ಲಿ ಮದುವೆ ಮಾಡಿಕೊಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮಾರುತಿ ಹನುಮಂತಪ್ಪ ಹಜಾರೆ ಮತ್ತು ವಾದಿಯ ತಾಯಿ ಸಾವಕ್ಕ ರವರಿಂದ ವಾದಿ ಜನಿಸಿಲ್ಲ ಎಂದರೆ ಸರಿಯಲ್ಲ. ವಾದಿ ಸದರಿ ಮಾರುತಿ ಹನುಮಂತಪ್ಪ ಹಜಾರೆ ಮತ್ತು ಸಾವಕ್ಕ ರವರಿಂದ ಜನಿಸಿಲ್ಲ ಎಂದು ನನಗೆ ಗೊತ್ತಿದ್ದರು ಸಹ ನಾನು ವಾದಿ ಸದರಿಯವರ ಮಗ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಸದರಿ ಮಾರುತಿ 1988 ರಲ್ಲಿ ತೀರಿಕೊಂಡಿರುತ್ತಾರೆ. ಆತ ನವಲೂರಿನಲ್ಲಿ ತೀರಿಕೊಂಡಿರುತ್ತಾರೆ. ಆಗ ನನಗೆ ವಯಸ್ಸು 24-25 ವರುಷ ಇದ್ದಿರಬಹುದು. ಸದರಿ ಮಾರುತಿಯ ಹೆಂಡತಿ ಸಾವಕ್ಕ ಅಲಿಯಾಸ ದ್ಯಾಮವ್ವ ದಿಃ 15.06.1988 ರಂದು ಅವಳ ತವರು ಮನೆ ಕುಂದಗೋಳದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮಾರುತಿ ತೀರಿಕೊಳ್ಳುವ 1 ವರುಷದ ಮುಂಚೆ ಸದರಿ ಸಾವಕ್ಕ ತಿರಿಕೊಂಡಿದ್ದರು ಎನ್ನುತ್ತಾರೆ. ಸದರಿ ಮಾರುತಿ ಹನುಮಂತಪ್ಪ ಹಜಾರೆ ಹಾಗೂ ಸಾವಕ್ಕ ಅಲಿಯಾಸ ದ್ಯಾಮವ್ವ ರವರಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ಸಾಕ್ಷಿ( ದ್ಯಾಮವ್ವ ಎಂಬುವವರ ಬಗ್ಗೆ ಗೊತ್ತಿಲ್ಲ ಸಾವಕ್ಕ ರವರಿಗೆ ಬಸವರಾಜ ಎಂಬ ಮಗ ಇದ್ದಾನೆ ಎನ್ನುತ್ತಾರೆ. ಸದರಿ ಮಾರುತಿ ಮತ್ತು ಸಾವಕ್ಕ ಅಲಿಯಾಸ ದ್ಯಾಮವ್ವ ರವ ರಿರಗೆ ಯಾವುದೇ ಸಂತಾನ

ಇರಲಿಲ್ಲ ಎಂದು ನನಗೆ ಗೊತ್ತಿದ್ದರು ಸಹ ಸದರಿಯವರಿಗೆ ಬಸವರಾಜ ಎಂಬ ಮಗ ಇದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ವಾದಿ ಕೆಲಗೇರಿಯಲ್ಲಿ ವಾಸವಾಗಿದ್ದಾನೆ ಎಂದರೆ ಸರಿ. ವಾದಿ ತಾನು ಕೆಲಗೇರಿಯಲ್ಲಿ ಖಾಯಂ ಆಗಿ ವಾಸವಾಗಿದ್ದೆನೆ ಎಂದು ತನ್ನ ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಯಾವತ್ತು ನವಲೂರು ಗ್ರಾಮದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಆತ ನವಲೂರು ಗ್ರಾಮದ ವಾಸಿ ಅಲ್ಲ ಎಂದರೆ ಸರಿಯಲ್ಲ. ವಾದಿ 1 ರಿಂದ 8 ನೇ ಪ್ರತಿವಾದಿಯವರ ಮನೆತನಕ್ಕೆ ಯಾವುದೇ ರೀತಿಯಿಂದ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಾದಿ ಎಷ್ಟನೇ ಇಸ್ವಿಯಲ್ಲಿ ಜನಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ವಾದಿ 1 ರಿಂದ 8 ನೇ ಪ್ರತಿವಾದಿಯವರ ಮನೆತನಕ್ಕೆ ಯಾವುದೇ ರೀತಿಯಿಂದ ಸಂಬಂದ ಇಲ್ಲ ಎಂದು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಾರುತಿ ತಂದೆ ಹನುಮಂತಪ್ಪ ಹಜಾರೆ ರವರ ಪರಿಚಯ ನನಗೆ ಯಾವತ್ತು ಇರಲಿಲ್ಲ ಎಂದರೆ ಸರಿಯಲ್ಲ. ಹಾಗೂ ವಾದಿಯ ಪರಿಚಯ ಸಹ ನನಗೆ ಯಾವತ್ತು ಇಲ್ಲ ಎಂದರೆ ಸಾಕ್ಷಿ ನಾನು ವಾದಿಯನ್ನು ಆತ ಚಿಕ್ಕವನಿದ್ದಾಗ ನೊಡಿದ್ದೆ ಎನ್ನುತ್ತಾರೆ.

14. ವಾದಿಯ ತಾಯಿ 1987 ರಲ್ಲಿ ತಿರಿಕೊಂಡಿರುತ್ತಾಳೆ. ನಮ್ಮ ಗ್ರಾಮದ ಮಂಜುನಾಥ ಬಸಪ್ಪ ಬಡಕುರಿ ರವರ ಪರಿಚಯ ನನಗೆ ಇದೆ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ವಾದಿ ಸದರಿ ಮಂಜುನಾಥ ಬಸಪ್ಪ ಬಡಕುರಿ ರವರ ಜೊತೆ ದಾವಾ ಸರ್ವೇ ನಂ.53/1 ಎ ಗೆ ಸಂಬಂದಿಸಿದಂತೆ ದಿಃ 13.06.2022 ರಂದು ಖರೀದಿ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಎಷ್ಟು ಕ್ಷೇತ್ರಕ್ಕೆ ಸದರಿ ಕರಾರು ಪತ್ರ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರ ಮಾಡುವ ಕಾಲಕ್ಕೆ ಈ ದಾವೆ ಚಾಲ್ತಿ ಇದ್ದ ಬಗ್ಗೆ ವಾದಿ ನನಗೆ ಹೇಳಿರಲಿಲ್ಲ. ಸದರಿ ಕರಾರು ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಈಗ ಸಾಕ್ಷಿಗೆ ನಿಡಿ.3 ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಡಿ.**3**(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಇನ್ನೊರ್ವ ಸಾಕ್ಷಿದಾರನಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

15. ಸದರಿ ಮಂಜುನಾಥ ಬಸಪ್ಪ ಬಡಕುರಿ ವಾರ್ಡ ನಂ.23 ಕ್ಕೆ ಕಾರ್ಪೊರೇಟರ ಆಗಿರುತ್ತಾರೆ. ಆತ ರಾಜಕೀಯ ಪ್ರಭಾವಿ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಂಜುನಾಥ

ಬಡಕುರಿ ತನ್ನ ರಾಜಕಿಯ ಪ್ರಭಾವ ಬಳಸಿ ದಾವಾ ಜಮೀನುಗಳಿಗೆ ಸಂಬಂದಿಸಿದಂತೆ 1 ರಿಂದ 8 ನೇ ಪ್ರತಿವಾದಿಯರಿಗೆ ಮೇಲಿಂದ ಮೇಲೆ ತೊಂದರೆ ನೀಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಡಿ.3 ಕರಾರು ಪತ್ರದ ವ್ಯಹವಾರದಲ್ಲಿ ಪ್ರಾಸಾ2 ರವರು ಸಹ ಭಾಗವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಮದ್ಯಪಾನ ಮಾಡುವ ಹಾಗೂ ಜೂಜಾಟ ಆಡುವ ಚಟ ಇದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸಲು ಸದರಿ ಮಂಜುನಾಥ ಬಡಕುರಿ ರವರೇ ವಾದಿಗೆ ಕುಮ್ಮಕ್ಕು ನೀಡಿ ದಾಖಲಿಸಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸಲು ನಾನು , ಪ್ರಾಸಾ2 ಹಾಗೂ ಮಂಜುನಾಥ ಬಡಕುರಿ ರವರು ವಾದಿಯೊಂದಗೆ ಶಾಮಿಲಾಗಿದ್ದೆವೆ ಎಂದರೆ ಸರಿಯಲ್ಲ. ವಾದಿ 1 ರಿಂದ 8 ನೇ ಪ್ರತಿವಾದಿನಯರ ಮನೆತನಕ್ಕೆ ಯಾವುದೇ ರೀತಿಯಿಂದ ಸಂಬಂದಿ ಇಲ್ಲ ಎಂದು ಗೊತ್ತಿದ್ದರು ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಪಾಲು ಕೇಳಲು ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಾಸಾ2 , ವಾದಿ ಹಾಗೂ ಸದರಿ ಮಂಜುನಾಥ ಬಡಕುರಿ ರವರು ಮಿಲಾಪಿಯಾಗಿ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 1 ರಿಂದ 8 ನೇ ಪ್ರತಿವಾದಿಯರು ಮನೆತನಕ್ಕೂ ಹಾಗೂ ನಮಗೂ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಆದ್ದರಿಂದ 1 ರಿಂದ 8 ನೇ ಪ್ರತಿವಾದಿಯರ ಮನೆತನದವರಿಗೆ ತೊಂದರ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.'

**ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ ಶ್ರೀ ಎನ್ ಬಿ ಕುಂಬಾರ ವಕೀಲರಿಂದ**

1. ಸರ್ವೇ ನಂ.55/1 ಜಮೀನು ನವಲೂರಿನ ಗಣಪತಿ ದೇವಸ್ಥಾನ ಎದುರಿಗೆ ಇದೆ ಎಂದರೆ ಸಾಕ್ಷಿ ಸದರಿ ದೇವಸ್ಥಾನದ ಬಲಭಾಗಕ್ಕೆ ಇದೆ ಎನ್ನುತ್ತಾರೆ. ಸದರಿ ಜಮೀನು 1 ಎಕರೆ 30 ಗುಂಟೆ ಇದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಆ ಪೈಕಿ 10 ನೇ ಪ್ರತಿವಾದಿ 1 ಎಕರೆ 24 ಗುಎಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಸದರಿ ಜಮೀನನ್ನು 10 ನೇ ಪ್ರತಿವಾದಿ ಎನ್ ಎ ಮಾಡಿ ವಸತಿ ಪ್ಲಾಟಗಳನ್ನು ನಿರ್ಮಿಸಿ ಅವುಗಳನ್ನು ಮಾರಾಟ ವಮಾಡಿರುತ್ತಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಸದರಿ ಪ್ಲಾಟಗಳಲ್ಲಿ 10-15 ಮನೆಗಳನ್ನು ನಿರ್ಮಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆ ಮ್ಯಾಗೇರಿ ಓಣಿಯಲ್ಲಿ ಇದೆ. ನಾನು ನನ್ನ ಮನೆಯಿಂದ ಧಾರವಾಡಕ್ಕೆ ಬರಬೆಕಾದರೇ ಸದರಿ ಗಣಪತಿ ದೇವಸ್ಥಾನದ ಮುಂಭಾಗದಿಂದ ಬರಬೆಕಾಗುತ್ತದೆ ಎಂದರೆ ಸರಿ. ಸದರಿ ನಮ್ಮ ಮನೆಯಿಂದ ಧಾರವಾಡಕ್ಕೆ ಬರಬೆಕಾದರೇ ಸದರಿ ರಸ್ತೆಯ ಎಡಭಾಗಕ್ಕೆ ಸರ್ವೇ ನಂ.55/1 ಬರುತ್ತದೆ ಎಂದರೆ ಸರಿ. ಸದರಿ ಜಮಿನಿನಲ್ಲಿ ನಿವೇಶನಗಳು ಮಾಡಿದ್ದು ಹಾಗೂ

ನಿವೇಶನಗಳಲ್ಲಿ ಮನೆ ನಿರ್ಮಿಸಿದ್ದು ರಸ್ತೆಯಿಂದ ಹೊಗಿ ಬರಬೆಕಾದರೇ ಕಾಣುತ್ತವೆ ಎಂದರೆ ಸಾಕ್ಷಿ ಸದರಿ ಸರ್ವೆ ನಂ.55/1 ಜಮಿನಕ್ಕಿಂತ ರಸ್ತೆಯ ಪಕ್ಕ ಇರುವ ಜಮಿನಿನಲ್ಲಿ ಮನೆಗಳು ಇದುದ್ದರಿಂದ ಸದರಿ ಸರ್ವೆ ನಂ.55/1 ರಲ್ಲಿ ಮನೆಗಳನ್ನು ನಿರ್ಮಿಸಲಾಗಿದೆಯೊ ಇಲ್ಲವೂ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ಸರ್ವೆ ನಂ.55/1 ರಲ್ಲಿ ಮನೆಗಳನ್ನು ನಿರ್ಮಿಸಲಾಗಿದೆಯೊ ಇಲ್ಲವೂ ನನಗೆ ಗೊತ್ತಿಲ್ಲ.

2. ಸರ್ವೆ ನಂ.55/1 ಜಮಿನಿಗೆ ಹೊಂದಿಕೊಂಡೆ ನಾನು ಸಹ ಒಎಂದು ಲೇ ಔಟ್ ಹೊಂದಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲೇ ಔಟ್ ನಲ್ಲಿ ಅಯ್ಯಪ್ಪ ಸ್ವಾಮಿ ದೇವಸ್ಥಾನ ಇದೆ ಎಂದರೆ ಇರಬಹುದು. ಪ್ರತಿ ವರ್ಷ ಸದರಿ ದೇವಸ್ಥಾನದಲ್ಲಿ ಜಾತ್ರೆ ಮಾಡಲಾಗುತ್ತದೆ ಎಂದರೆ ಇರಬಹುದು.

3. 10 ನೇ ಪ್ರತಿವಾದಿಯ ಸಹೋದರ ಬಸವರಾಜ ರವರ ಮನೆ ನನ್ನ ಮನೆಯ ಪಕ್ಕ ಇದೆ ಎಂದರೆ ಸರಿ. ಸದರಿ ಬಸವರಾಜ ಹಾಗೂ ನಮ್ಮ ಮನೆ ಹಳೆಯ ಮನೆಗಳು ಇದ್ದು ಆತ ತನ್ನ ಮನೆಯನ್ನು ಕೆಡವಿ ಬೇರೆ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಬಸವರಾಜ ರವರಿಗೆ ಮನೆ ಕಟ್ಟುವ ಕಾಲಕ್ಕೆ ಬಹಳಷ್ಟು ಕಿರುಕುಳ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಸದರಿಯವರ ಹಾಗೂ ನಮ್ಮ ಮನೆಯ ಮದ್ಯ 4x100 ಅಡಿ ಜಾಗವನ್ನು ಬಿಟ್ಟ ನಂತರ ನಾನು ಸದರಿ ಬಸವರಾಜ ರವರಿಗೆ ಮನೆ ನಿರ್ಮಿಸಲು ಅನುವು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು 10 ನೇ ಪ್ರತಿವಾದಿಯ ಸಹೋದರನ ಜೊತೆ ವೈಮನಸ್ಸು ಹೊಂದಿದ್ದರಿಂದ 10 ನೇ ಪ್ರತಿವಾದಿಗೆ ಹಾನಿಯನ್ನುಂಟು ಮಾಡುವ ಉದ್ದೆಶದಿಂದ ಆತನ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು , ಪ್ರಾಸಾ2 ಹಾಗೂ ಮಂಜುನಾಥ ಬಡಕುರಿ ರವರು ಸೇರಿ ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶೇದಿಂದ ವಾದಿಯಿಂದ ಸುಳ್ಳು ದಾವೆಯನ್ನು ದಾಖಲಿಸಿಸಿರುತ್ತೇವೆ ಎಂದರೆ ಸರಿಯಲ್ಲ.

4. ಈಗ ನವಲೂರಿನಲ್ಲಿ 1 ಎಕರೆ ಜಮಿನಿನ ಬೆಲೆ 2 ಕೋಟಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಖಾಯಂ ಉದ್ಯೊಗ ರಿಯಲ್ ಎಸ್ಟೇಟ್ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಕ್ಕಲುತನ ಮತ್ತು ಹೈನುಗಾರಿಗೆ ನನ್ನ ಉದ್ಯೊಗ ಎನ್ನುತ್ತಾರೆ. ಸದರಿ ನಮ್ಮ ಗ್ರಾಮದಲ್ಲಿ 30x 40 ನಿವೇಶನಕ್ಕೆ ಎಷ್ಟು ಬೇಲೆ ಇದೆ ಹಾಗೂ ಪ್ರತಿ ಎಕರೆಗೆ ಎಷ್ಟು ಇದೆ ಎಂದು ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಪ್ರಮಾಣ ಪತ್ರ ದಲ್ಲಿ ಬರೆದ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ವಾದಿ ಯಾವ ದಿನಾಂಕ , ತಿಂಗಳು ಹಾಗೂ ಇಸ್ವಿ ಎಂದು ಪ್ರತಿವಾದಿಯರ ಬಳಿ ಹೊಗಿ ಪಾಲು ಕೇಳಿರುತ್ತಾನೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ವಾದಿ ಮಾರುತಿ ಹನುಮಂತಪ್ಪ ಹಜಾರೆ ರವರ ಮಗ ಅಲ್ಲ ಎಂದರೆ ಸರಿಯಲ್ಲ. ಅದ್ದರಿಂದ 10 ನೇ ಪ್ರತಿವಾದಿ ಖರೀದಿಸಿದ ಜಮಿನಿನಲ್ಲಿ ಪಾಲು ಕೇಳಲು ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

6. ವಾದಿ ಯಾವ ಇಸ್ವಿಯಲ್ಲಿ ಯಾವ ಶಾಲೆಯಲ್ಲಿ ಎಷ್ಟನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿದ್ದಾನೆ ಎಂದು ನನಗೆ ಮಾಹಿತಿ ಇದೆ. ವಾದಿ 1 ರಿಂದ 4 ನೇ ತರಗತಿ ವೆರಗೆ ನವಲೂರಿನಲ್ಲಿ ವಿದ್ಯಾಬ್ಯಾಸ ಮಾಡಿದ್ದು 5 ರಿಂದ 9 ನೇ ತರಗತಿ ವರೆಗೆ ಹಿಂಚಗಿರಿಯಲ್ಲಿ ವಿದ್ಯಾಬ್ಯಾಸ ಮಾಡಿರುತ್ತಾರೆ. ವಾದಿಯ ಜನ್ಮ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಈಗ ಸಾಕ್ಷಿಗೆ ಬಸವರಾಜ ಮಾರರುತಿ ಹಜಾರೆ ಎಂಬುವವರ ಎಲ್ ಸಿ ಯ ಜರಾಕ್ಸ ಪ್ರತಿಯನ್ನು ತೊರಿಸಿ ಸದರಿ ಎಲ್ ಸಿ ವಾದಿಗೆ ಸಂಬಂದಿಸಿದ್ದು ಎಂದು ಸಾಕ್ಷಿಗೆ ಸೂಚಿಸಿದ್ದು ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದರಿಂದ **ನಿಡಿ.5** ಎಂದು ಗುರುತಿಸಲಾಯಿತು. ( ಸದರಿ ನಿಡಿ.5 ದಾಖಲೆ ಜರಾಕ್ಸ ಪ್ರತಿಯಾಗಿದ್ದು ಅದನ್ನು ಗುರುತಿಸಲು ವಾದಿ ಪರ ವಕೀಲರು ತಕರಾರು ಮಾಡಿದ್ದು ಸದರಿಯವರ ತಕರಾರಿಗೆ ಒಳಪಟ್ಟು ಸದರಿ ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು) . ವಾದಿ ನನಗೆ ಆತ್ಮಿಯನಾದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( 10 ನೇ ಪ್ರತಿವಾದಿ ಪರ ವಕೀಲರು 1 ರಿಂದ 8 ನೇ ಪ್ರತಿವಾದಿಯರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಮುಂದುವರೆದ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲು ಕೊರಿಕೊಂಡ ಮೇರೆಗೆ ಅನುಮತಿಸಲಾಯಿತು. )

**<u>ಪಾಟೀ ಸವಾಲುಃ 15 ನೇ ಪ್ರತಿವಾದಿ ಪರ ಶ್ರೀ ವಿ ಎಸ ಎಸ ವಕೀಲರಿಂದ</u>**

1. ದಾವಾ ಸ್ವತ್ತುಗಳು ಒಟ್ಟು 5 ಜಮೀನುಗಳು 3 ಮನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ವಾದಿಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.55/1 ಎ ಜಮಿನಿನಲ್ಲಿ ಪ್ರತಿವಾದಿ 10 ನೇ ದವರು 12 ಪ್ಲಾಟಗಳನ್ನು ನಿರ್ಮಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿಯಿಂದ 15 ಪ್ರತಿವಾದಿ ಸದರಿ ಜಮಿನಿನಲ್ಲಿ ನಿರ್ಮಿಸಿದ ಪ್ಲಾಟಗಳನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಸದರಿ ಜಮಿನನ್ನು ಮೂಲ ಮಾಲೀಕರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 15 ನೇ

**ಪಿ.ಡಬ್ಲೂ.3**

ಪ್ರತಿವಾದಿ ತಾನು ಖರೀದಿಸಿದ ನಿವೇಶನದ ಸ್ವಾದಿನತೆ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಸದರಿ ನಿವೇಶನವನ್ನು ಅವರೇ ಉಪಯೊಗಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 15 ನೇ ಪ್ರತಿವಾದಿ ಖರೀದಿಸಿದ ನಿವೇಶನದ ದಾಖಲಾತಿಗಳನ್ನು ಪರಿಶೀಲಿಸಿಯೇ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಸದರಿ 15 ನೇ ಪ್ರತಿವಾದಿ ಖರೀದಿಸಿದ ನಿವೇಶನಕ್ಕೆ ಸಂಬಂದಿಸಿದಂತೆ ಯಾವುದಾದರೂ ತಂಟೆ ತಕರಾರು ಬಂದರೇ ನಾನೇ ಬಗೆಹರಿಸಿ ಕೊಡುತ್ತೇನೆ ಎಂದು ಹೇಳಿದ್ದರಿಂದ 15 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಇರಬಹುದು. 10 ನೇ ಪ್ರತಿವಾದಿ ಸದರಿ ಜಮಿನನ್ನು ಖರೀದಿಸಿದ ದಿನದಿಂದ ಅವರೇ ಸಂಪೂರ್ಣ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಹಾಗೂ 15 ನೇ ಪ್ರತಿವಾದಿ ಸದರಿ ಜಮಿನು ಎನ್ ಎ ಆದದನ್ನು ವಿಚಾರಣೆ ಮಾಡಿ ಸ್ವಲ್ಪ ದಿನದ ನಂತರ ಖರೀದಿಸಿರುತ್ತಾರೆ ಎಂದರೆ ಇರಬಹುದು. ವಾದಿ ಈ ದಾವೆಯಲ್ಲಿ ಕೇಳಿದ ಪರಿಹಾರ 15 ನೇ ಪ್ರತಿವಾದಿಗೆ ಸಂಬಂಧನಕಾರಕವಾಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಸಾಕ್ಷಿ ನುಡಿಯಲು ಸಮನ್ಸ ಬಂದಿರಲಿಪಿಲ್ಲ. ನಾನು ವಾದಿ ಮಾತು ಕೇಳಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( 18 ನೇ ಪ್ರತಿವಾದಿ ಪರ ವಕೀಲರು 1 ರಿಂದ 8 ಮತ್ತು 10 ನೇ ಪ್ರತಿವಾದಿಯರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲು ಕೊರಿಕೊಂಡ ಮೇರೆಗೆ ಅನುಮತಿಸಲಾಯಿತು. )

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.